**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು,**
**ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ : ಸಿ5(2)ಉನಿ[ಭೋ]ಮುಂಬಡ್ತಿ-03/2021-22 ದಿನಾಂಕ:18-05-2022

**ಜ್ಞಾಪನ**

ವಿಷಯ :- ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಬೋಧಕೇತರ ವೃಂದದ ಉಪ ನಿರ್ದೇಶಕರ '[ಬೋಧಕೇತರ] ಹುದ್ದೆಗೆ ಸ್ಥಾನಪನ್ನ ಬಡ್ತಿಯನ್ನು ನೀಡುವ ಬಗ್ಗೆ.

* * * * * * *

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ ಬೋಧಕೇತರ ವೃಂದದ ಉಪ ನಿರ್ದೇಶಕರ ಹುದ್ದೆಗಳಿಗೆ ಜೇಷ್ಠತೆ ಹಾಗೂ ಅರ್ಹತೆಯ ಆಧಾರ ಸ್ಥಾನಪನ್ನ ಬಡ್ತಿಯನ್ನು ನೀಡಬೇಕಾಗಿರುವುದರಿಂದ ಜ್ಯೇಷ್ಠತೆ ಹಾಗೂ ಮೀಸಲಾತಿಯ ಮೇರೆಗೆ ಬಡ್ತಿಗಾಗಿ ಅರ್ಹರಿರುವ ತಮ್ಮ ವ್ಯಾಪ್ತಿಯ ಹಿರಿಯ ಸಹಾಯಕ ನಿರ್ದೇಶಕರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಮಾಹಿತಿಗಳನ್ನು ಒಳಗೊಂಡ ಬಡ್ತಿಯ ಡೋಸಿಯರ್ ಸಿದ್ದಪಡಿಸಿ ಆದ್ಯತೆಯ ಮೇರೆಗೆ ಕಳುಹಿಸಿಕೊಡುವಂತೆ ಕೋರಿದೆ.

01. 2017-18 ರಿಂದ 2021-22 ನೇ ಸಾಲಿನವರೆಗಿನ ಕಾರ್ಯನಿರ್ವಹಣಾ ವರದಿಗಳನ್ನು **ಪರಿಶೀಲನಾಧಿಕಾರಿಗಳ ಹಾಗೂ ಅಂಗೀಕಾರ ಪ್ರಾಧಿಕಾರಿಗಳ ಷರಾದೊಂದಿಗೆ.**
02. ಇಲಾಖಾ ಪರೀಕ್ಷೆಗಳಾದ ಅಕೌಂಟ್ಸ್ ಹೈಯರ್, ಜನರಲ್ ಲಾ ಭಾಗ-1 ಮತ್ತು 2 ಗಳಲ್ಲಿ ಉತ್ತೀರ್ಣರಾದ ಬಗ್ಗೆ ದಾಖಲೆಗಳ ಪ್ರತಿ.
03. ಕನ್ನಡ ಭಾಷಾ ಪರೀಕ್ಷೆ ತೇರ್ಗಡೆ ಪ್ರಮಾಣ ಪತ್ರ / ವಿನಾಯ್ತಿ ಪ್ರಪತ್ರ.
04. ಅಧಿಕಾರಿಯ ಸೇವಾ ವಿವರಗಳು – ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ
05. ಸಂಬಂಧಿಸಿದ ಅಧಿಕಾರಿಯ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಅಥವಾ ನ್ಯಾಯಾಲಯದ ಪ್ರಕರಣಗಳಾಗಲಿ ಬಾಕಿ ಇರುವ / ಇಲ್ಲದೇ ಇರುವ ಬಗ್ಗೆ ದೃಢೀಕರಣ ಪತ್ರ. (ವಿಚಾರಣೆಗಳು ಬಾಕಿ ಇದ್ದಲ್ಲಿ ಸಿ.ಸಿ.ಎ. ನಿಯಮದಂತೆ ಕರಡು ಆರೋಪ ಪಟ್ಟಿ ಜಾರಿಯಾಗಿರಬೇಕು).

ಮೇಲ್ಕಂಡ ಮಾಹಿತಿಯನ್ನು / ದಾಖಲೆಗಳನ್ನು ಒಳಗೊಂಡ ಡೋಸಿಯರ್‌ನ್ನು ದಿನಾಂಕ:25-05-2022 ರೊಳಗಾಗಿ ಈ ಕಛೇರಿಗೆ ಕಳುಹಿಸಿಕೊಡುವಂತೆ ಕೋರಿದೆ.

**[ಕಡತದ ಟಿಪ್ಪಣಿಯು ಮಾನ್ಯ ಆಯುಕ್ತರಿಂದ ಅನುಮೋದಿಸಿದೆ]**

ತಮ್ಮ ನಂಬುಗೆಯ,

ಡಾ.ರೂಪಶ್ರೀ.ಎಸ್. ಕೆ.ಎ.ಎಸ್
ಜಂಟಿ ನಿರ್ದೇಶಕರು (ಆಡಳಿತ)
18/5/22

ಪ್ರತಿ :-

01. ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ ಇವರಿಗೆ ಅಗತ್ಯ ಕ್ರಮಕ್ಕಾಗಿ.
02. ಸಂಬಂಧಿಸಿದ ಅಧಿಕಾರಿಗಳಿಗೆ,
03. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ
**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು,**
**ನೃತಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ : ಸಿ5(2)ಉನಿ[ಭೋ]ಮುಂಬಡ್ತಿ–03/2021–22 ದಿನಾಂಕ : 18–05–2022

## ಅನುಬಂಧ

ಹಿರಿಯ ಸಹಾಯಕ ನಿರ್ದೇಶಕರು [ಭೋ] ವೃಂದದಿಂದ ಉಪ ನಿರ್ದೇಶಕರು(ಬೋಧಕೇತರ) ವೃಂದಕ್ಕೆ ಬಡ್ತಿಯನ್ನು ನೀಡುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾದ ಅಧಿಕಾರಿಗಳ ವಿವರ.

| ಕ್ರ. ಸಂ. | ಅಧಿಕಾರಿಯ ಹೆಸರು ಮತ್ತು ಕಛೇರಿ ವಿಳಾಸ | ರಾಜ್ಯ ಮಟ್ಟದ ಹಿರಿಯ ಸಹಾಯಕ ನಿರ್ದೇಶಕರ ಜ್ಯೇಷ್ಠತಾ ಪಟ್ಟಿಯಲ್ಲಿ ಜ್ಯೇಷ್ಠತಾ ಸಂಖ್ಯೆ | ಪ್ರವರ್ಗ |
|---|---|---|---|
| 1 | ಶ್ರೀ.ಎ.ಎಸ್.ಪಾಟೀಲ್<br>ಹಿರಿಯ ಸಹಾಯಕ ನಿರ್ದೇಶಕರು,<br>ಜಂಟಿ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ | 46 | ಪ.ಪಂ |
| 2. | ಶ್ರೀ.ಜಿ.ದೇವರಾಜು,<br>ಹಿರಿಯ ಸಹಾಯಕ ನಿರ್ದೇಶಕರು,<br>ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | 67 | ಇತರೆ |

ಡಾ.ರೂಪಶ್ರೀ.ಎಸ್. ಕೆ.ಎ.ಎಸ್
ಜಂಟಿ ನಿರ್ದೇಶಕರು(ಆಡಳಿತ)
18/5/22

# ನಮೂನೆ

**ಹಿರಿಯ ಸಹಾಯಕ ನಿರ್ದೇಶಕರು(ಬೋಧಕೇತರ) ವೃಂದದಿಂದ ಉಪ ನಿರ್ದೇಶಕರು[ಬೋಧಕೇತರ] ವೃಂದಕ್ಕೆ ಸ್ಥಾನಪನ್ನ ಬಡ್ತಿಯನ್ನು ನೀಡಲು ಅಗತ್ಯವಿರುವ ಮಾಹಿತಿ**

| ಕ್ರ.ಸಂ. | ಅಧಿಕಾರಿಗಳ ಸೇವಾ ವಿವರ | ಮಾಹಿತಿ |
|---|---|---|
| 1 | ಹಿರಿಯ ಸಹಾಯಕ ನಿರ್ದೇಶಕರ ಹುದ್ದೆಯಲ್ಲಿ ಜೇಷ್ಠತಾ ಕ್ರಮಾಂಕ | |
| 2 | ಅಧಿಕಾರಿಯ ಹೆಸರು | |
| 3 | ಪದನಾಮ | |
| 4 | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಛೇರಿಯ ಪೂರ್ಣ ವಿಳಾಸ<br><br>ಮೊಬೈಲ್ ಸಂಖ್ಯೆ : | |
| 5 | ಜನ್ಮ ದಿನಾಂಕ | |
| 6 | ಗುಂಪು (ಪ.ಜಾತಿ, ಪ.ವರ್ಗ/ ಸಮಾನ್ಯ) | |
| 7 | ಇಲಾಖಾ ಪರೀಕ್ಷಗಳಲ್ಲಿ ಉತ್ತೀರ್ಣತೆ<br>7. ಅಕೌಂಟ್ಸ್ ಹೈಯರ್<br>8. ಜನರಲ್ ಲಾ ಭಾಗ 1 ಮತ್ತು 2<br>9. ಕನ್ನಡ ಭಾಷಾ ಪರೀಕ್ಷೆ | **ನೋಂದಣಿ ಸಂಖ್ಯೆ ದಿನಾಂಕ** |
| 8 | ಕಾರ್ಯನಿರ್ವಹಣಾ ವರದಿಗಳು 2017-18 ರಿಂದ 2021-22 ರವರೆವಿಗೆ ವರ್ಷವಾರು ಪ್ರತ್ಯೇಕವಾಗಿ ಸಲ್ಲಿಸುವುದು | |
| 9 | ಇಲಾಖೆಗೆ ನೇಮಕಗೊಂಡ ನೇಮಕಾತಿ ಆದೇಶ ಪತ್ರ ಲಗತ್ತಿಸುವುದು | |
| 10 | ಖಾಯಂ ಪೂರ್ವ ಸೇವಾವಧಿ ಘೋಷಣೆಯಾಗಿರುವ ಆದೇಶ ಪತ್ರ ಲಗತ್ತಿಸುವುದು. | |
| 11 | ಇಲಾಖಾ ವಿಚಾರಣೆ / ದೂರು/ ನ್ಯಾಯಲಯದ ಪ್ರಕರಣಗಳು ಇದ್ದಲ್ಲಿ ವಿವರ | |
| 12 | ಷರಾ | |

ಮೇಲ್ಕಂಡ ಎಲ್ಲಾ ಅಂಶಗಳು ಸಂಬಂಧಿತ ಅಧಿಕಾರಿಗಳ ಸೇವಾ ವಿವರ / ವಹಿಯನ್ನು ಪರಿಶೀಲಿಸಿ, ಮಾಹಿತಿಯನ್ನು ನೀಡಲಾಗಿದೆ ಎಂದು ಈ ಮೂಲಕ ದೃಢೀಕರಿಸಸುತ್ತೇನೆ.

ದಿನಾಂಕ :

ಸ್ಥಳ :

ಕಛೇರಿ ಮುಖ್ಯಸ್ಥರ ಸಹಿ
ಮೊಹರಿನೊಂದಿಗೆ